ಯಾವುದೇ ಕವಿತೆಗಳು ಹೃದಯದ ಭಾಷೆಗಳಾಗಬೇಕು

ಶಿರಾ

ಕಾವ್ಯವನ್ನು ಕಟ್ಟಿಕೊಡುವ ಕವಿಗಳು ಭಾಷೆಯ ನೆಲೆಗಟ್ಟಿನಲ್ಲಿ ಕವಿತಾರಚನೆಯನ್ನು ರೂಢಿಸಿಕೊಳ್ಳಬೇಕಿದ್ದು ಕವಿಗಳ ಕವಿತೆಗಳು ಹೃದಯದ ಕವಿತೆಗಳಾಗಬೇಕು ಎಂದು ಲೇಖಕಿ ಕಮಲಾ ನರಸಿಂಹ ತಿಳಿಸಿದರು. ಸೋಮವಾರದಂದು ತಾ|| ಕ.ಸಾ.ಪ. ವತಿಯಿಂದ ಕೈಗೊಳ್ಳಲಾಗಿದ್ದ 5ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಏರ್ಪಡಿಸಲಾಗಿದ್ದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾವ್ಯಗಳನ್ನುಕಟ್ಟಿಕೊಡುವಾಗಹೊರಹೊಮ್ಮುವ ಭಾಷೆ ಅಂತರಂಗದ ಭಾಷೆಯಾಗಬೇಕು. ಭಾವನೆ ಹಾಗೂ ಅನುಭಾವನೆಗಳನ್ನು ಉಣಬಡಿಸಿದಾಗ ಭಾಷೆಗೆ ಹೆಚ್ಚು ಶಕ್ತಿ ಬರುತ್ತದೆ ಎಂದರು. ಕವಿತೆಗಳು ಕಾಟಾಚಾರಕ್ಕೆಂಬಂತೆ ಹೊರ ಬರುವ ತವಕವನ್ನು ಪಡೆಯಬಾರದು. ಸಮಾಜ ಹಾಗೂ ಅಧಿಕಾರ ಶಕ್ತಿಗಳ ಬದಲಾವಣೆಗೆ ಕವಿತೆಗಳು ಮಾರ್ಗದರ್ಶನವಾದಾಗ ಮಾತ್ರ ಕವಿ ಹಾಗೂ ಕವಿತೆಗಳಿಗೆ ಅರ್ಥವಂತಿಕೆ ಸಿಗಲು ಸಾಧ್ಯ. ಅನೇಕ ಮಂದಿ ಅನಕ್ಷರಸ್ಥರು ಕೂಡ ಒಂದು ಪಿ.ಹೆಚ್.ಡಿ. ಪಡೆಯಬಲ್ಲಂತಹ ಜಾನಪದ ಕಾವ್ಯಗಳ ಕಣಜಗಳನ್ನೇ ಹೊಂದಿದ್ದು ಬರೆಯಲು ಬಾರದಿದ್ದರೂ ಅಕ್ಷರಸ್ಥರನ್ನೂ ಮೀರಿಸುವಂತಹ ಜ್ಞಾನ ಅವರಲ್ಲಿರುವಾಗ ಅಕ್ಷರಸ್ಥರಾದ ನಾವುಗಳು ಕಟ್ಟಿಕೊಡುವ ಕವಿತೆಗಳು ಎಂದಿಗೂ ಅನರ್ಥಗಳ ಕಲ್ಪನೆಗಳಿಗೆ ಎಡೆಯಾಗಬಾರದು ಎಂದು ಕಮಲಾ ನರಸಿಂಹ ತಿಳಿಸಿದರು. ವೈ.ನರೇಶ್‌ಬಾಬು ಹಾಗೂ ಬಡೇನಹಳ್ಳಿ ಟಿ.ಗೋವಿಂದಯ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಪ.ನಾ.ಹಳ್ಳಿ ಹರೀಶ್, ಡಾ||ತಿಮ್ಮರಾಜು, ಸಿರಾ ಶಾಹಿದ್, ಕೋಟೆ ಚಂದ್ರಶೇಖರ್, ಕರಿದಾಸರಹಳ್ಳಿ ನರಸಪ್ಪ, ಬರಗೂರು ಚಂದ್ರಾಚಾರ್, ಡಾ||ಬಿ. ಕೆ.ಮಂಜುನಾಥ್, ಡಿ.ಎಸ್.ಅಶ್ವಿನಿ, ಶ್ಯಾಮಾ ಜೋಯಿಸ್, ಸಿದ್ದಗಂಗಮ್ಮ ಸೇರಿದಂತೆ ಅನೇಕ ಮಂದಿ ಕವಿಗಳು ಕಾವ್ಯ ವಾಚನ ಮಾಡಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಸಿರಾ
ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ

ಮುಖ್ಯಾಂಶಗಳು

- ಸಿರಾ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿ
- ಲೇಖಕಿ ಕಮಲಾ ನರಸಿಂಹ ಅಧ್ಯಕ್ಷತೆ
- ಹಲವು ಕವಿಗಳಿಂದ ಕಾವ್ಯ ವಾಚನ

ನಾಳೆ ತುರುವೇಕೆರೆಯಲ್ಲಿ ಆಳ್ವಾಸ್ ಸಾಂಸ್ಕೃತಿಕ ವೈಭವ

ತುರುವೇಕೆರೆ

ತುರುವೇಕೆರೆ ಸಂಗಮ ಸಾಂಸ್ಕೃತಿಕಟ್ರಸ್ಟ್, ರೋಟರಿಕ್ಲಬ್‌ತುರುವೇಕೆರೆ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮೂಡಬಿದರೆ ಸಂಯುಕ್ತಾಶ್ರಯದಲ್ಲಿ ಪಟ್ಟಣದಲ್ಲಿಪ್ರಪ್ರಥಮ ಬಾರಿಗೆ ಆಳ್ವಾಸ್ ಸಾಂಸ್ಕೃತಿಕ ವೈಭವವನ್ನು ಫೆಬ್ರುವರಿ 15 ರ ಗುರುವಾರ ಸಂಜೆ 6 ಗಂಟೆಗೆ ಹಿರಣ್ಣಯ್ಯ ಬಯಲುರಂಗ ಮಂದಿರದಲ್ಲಿಏರ್ಪಡಿಸಲಾಗಿದೆಎಂದು ಸಂಗಮ ಸಾಂಸ್ಕೃತಿಕ ಟ್ರಸ್ಟ್‌ನ ಗೌರವಾಧ್ಯಕ್ಷ ಕೊಂಡಜ್ಜಿ ವಿಶ್ವನಾಥ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದ್ದು ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸದ ಎಸ್.ಪಿ.ಮುದ್ದಹನುಮೇಗೌಡ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಶಾಸಕ ಎಂ.ಟಿ.ಕೃಷ್ಣಪ್ಪ ವಹಿಸಲಿದ್ದು, ಆಳ್ವಸ್ ಶಿಕ್ಷಣ ಟ್ರಸ್ಟ್ ಅಧ್ಯಕ್ಷರು ಡಾ|| ಎಂ ಮೋಹನ್ ಆಳ್ವಾ ವಿಶೇಷ ಅಭಿನಂದನೆಯನ್ನು ಸಲ್ಲಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ಎಂ.ಡಿ.ಲಕ್ಷ್ಮೀನಾರಾಯಣ್, ಮಸಾಲೆ ಜಯರಾಮ್, ಚೌದ್ರಿರಂಗಪ್ಪ, ಬಿ.ಎಸ್. ವಸಂತ್ ಕುಮಾರ್. ಎಂ. ನಾರಾಯಣ್‌ಗೌಡ, ಚಂದ್ರೇಶ್, ಪಟ್ಟಣ ಪಂಚಾಯಿತಿಅಧ್ಯಕ್ಷ ಕೆ.ಟಿ.ಶಿವಶಂಕರ್ ತಾ.ಪಂ. ಅಧ್ಯಕ್ಷೆ ನಾಗರತ್ನ ಉಪಾಧ್ಯಕ್ಷೆ ತೀರ್ಥಕುಮಾರಿ ಹಾಗೂ ತಾಲ್ಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಲಿದ್ದು,ತಾಲ್ಲೂಕಿನ ಜನತೆ ಈ ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸಿ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕೆಂದರು.

ಆಳ್ವಾಸ್ ಸಾಂಸ್ಕೃತಿಕ ಘಟಕದ ಸಂಚಾಲಕ ನಾಗರಾಜ ಶೆಟ್ಟಿ ಮಾತನಾಡಿ ಭಾರತದ ಎಲ್ಲಾ ರಾಜ್ಯಗಳಿಂದ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ 26 ಸಾವಿರ ವಿದ್ಯಾರ್ಥಿಗಳಲ್ಲಿ ವಿವಿಧ ರಾಜ್ಯಗಳ ಪ್ರತಿಭಾನ್ವಿತ 350 ವಿದ್ಯಾರ್ಥಿಗಳಿಂದ ಕೇರಳದ ಮೋಹಿನಿಯಾಟ್ಟಮ್ , ಆಂಧ್ರ ಪ್ರದೇಶದ ಬಂಜಾರ ನೃತ್ಯ, ಮಣಿಪುರಿ ಸ್ಟಿಕ್ ಡ್ಯಾನ್ಸ್, ಶ್ರೀಲಂಕಾದ ಕ್ಯಾಂಡಿಯನ್ ನೃತ್ಯ, ಶಾಸ್ತ್ರೀಯ ನೃತ್ಯ ಹಾಗೂ ಮಲ್ಲಕಂಬ ಮತ್ತುರೋಪ್ ಕಸರತ್ತು ಸೇರಿದಂತೆ ಭಾರತೀಯ ವಿವಿಧ ರಾಜ್ಯಗಳ ಜಾನಪದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಗಳನ್ನು 18 ಪ್ರಕಾರಗಳ ನೃತ್ಯದ ಮೂಲಕ ಪ್ರದರ್ಶನ ನೀಡಲಿದ್ದಾರೆಎಂಧರು.

ಈ ಸಂದರ್ಭದಲ್ಲಿ ಸಂಗಮ ಸಾಂಸ್ಕೃತಿಕ ಟ್ರಸ್ಟ್ ನ ಅಧ್ಯಕ್ಷ ಸಾ.ಶಿ.ದೇವರಾಜ್, ಪಿ ಕಾರ್ಡ್ ಅಧ್ಯಕ್ಷ ಪ್ರಸನ್ನಕುಮಾರ್, ರೋಟರಿ ಕ್ಲಬ್‌ಅಧ್ಯಕ್ಷಅರಳಿಕೆರೆ ಲೋಕೇಶ್, ಪ್ರಕಾಶ್ ಗುಪ್ತ, ಅರಳಿಕೆರೆರವಿಕುಮಾರ್, ಎಸ್.ಎಂ. ಕುಮಾರಸ್ವಾಮಿ, ನೌಕರರ ಸಂಘದಅಧ್ಯಕ್ಷ ಮಂಜಣ್ಣ, ಸೇರಿದಂತೆ ಹಲವಾರು ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಪತ್ರಗಳು

ರಸ್ತೆ ಕಾಮಗಾರಿ ತುರ್ತಾಗಿ ಆಗಲಿ

ಮಾನ್ಯರೆ,

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಹೋಬಳಿ ಬೆಳ್ಳಾರ ಗ್ರಾಮದಿಂದ ಅಂಬಾರಪುರದವರೆಗೆ ರಸ್ತೆ ಕಾಮಗಾರಿ ನಡೆಯುತ್ತಿದ್ದು, ಅದು ತೀರಾ ಕಳಪೆಯಿಂದ ಕೂಡಿದೆ. ಸುಮಾರು 4 ಕಿ.ಮೀ.ವರೆಗೆ ಈ ಕಾಮಗಾರಿ ಆಗಬೇಕಾಗಿದ್ದು, ಅದು ನಿಧಾನಗತಿಯಲ್ಲಿ ಸಾಗುತ್ತಿದೆ. ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸಂಚಾರಕ್ಕೆ ಕಷ್ಟಕರವಾಗಿದೆ. ಆದ್ದರಿಂದ ಸಂಬಂಧಪಟ್ಟವರು ಕೂಡಲೇ ಇತ್ತ ಗಮನ ಹರಿಸಿ ಗುಣಮಟ್ಟದ ರಸ್ತೆ ನಿರ್ಮಿಸುವುದರ ಮೂಲಕ ತುರ್ತಾಗಿ ಕಾಮಗಾರಿ ಮುಗಿಸುವಂತೆ ಕ್ರಮ ಕೈಗೊಳ್ಳುವುದು.

■ -ಲ.ಪು.ಕರಿಯಪ್ಪ,
ಲಕ್ಕೇನಹಳ್ಳಿ,
ಚಿಕ್ಕನಾಯಕನಹಳ್ಳಿ ತಾ.

ವಿದ್ಯಾಪೀಠದಲ್ಲಿ ಸ್ವಚ್ಛತೆ ಕಾಪಾಡಿ

ಮಾನ್ಯರೆ,

ತಿಪಟೂರು ತಾಲ್ಲೂಕು ರಂಗಾಪುರದಲ್ಲಿರುವ ಶ್ರೀಪರದೇಶಿ ಕೇಂದ್ರ ಸ್ವಾಮೀಜಿ ವಿದ್ಯಾಪೀಠದಲ್ಲಿ ಅನೇಕ ವಿದ್ಯಾಸಂಸ್ಥೆಗಳಿದ್ದು, ಐಟಿಐ, ಡಿಪ್ಲೋಮಾ, ಪ್ರೌಢಶಾಲೆ, ಪ್ರಾಥಮಿಕ ಶಾಲೆ ಹೀಗೆ ಅನೇಕ ಶಾಲೆಗಳ ಮಕ್ಕಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದು, ಒಳ್ಳೆಯ ವಾತಾವರಣ ಹಾಗೂ ಸವಲತ್ತುಗಳಿರುತ್ತವೆ. ಆದರೆ ಇಲ್ಲಿನ ಊಟದ ಹಾಲ್ ಧೂಳಿನಿಂದ ಕೂಡಿದೆ. ಇಲ್ಲಿರುವ ಸಿಬ್ಬಂದಿಗಳು ಸ್ವಚ್ಛತೆಯ ಕಡೆ ಗಮನ ಹರಿಸುತ್ತಿಲ್ಲ. ಈ ಬಗ್ಗೆ ಕೇಳಿದರೆ ಹೊರೆಸುವ ಯಂತ್ರ ಕೆಟ್ಟಿದೆ ಎಂದೇಳುತ್ತಿದ್ದಾರೆ. ಆಡಳಿತ ಮಂಡಳಿಯವರೂ ಇದೇ ಉತ್ತರ ನೀಡುತ್ತಿದ್ದಾರೆ. ಅನ್ನ, ಮುದ್ದೆ, ಸಾರು ಎಲ್ಲಾ ಇಟ್ಟು ಇಲ್ಲಿಯ ಕೆಲಸಗಾರರು ಕಸವನ್ನು ಅದರ ಮೇಲೆಯೇ ಹೊಡೆಯುತ್ತಾರೆ. ಈ ಬಗ್ಗೆ ಕೇಳಿದರೆ ಅವರಿಂದ ಉಡಾಫೆಯ ಉತ್ತರ ಬರುತ್ತಿದೆ. ಇಂತಹ ಕಸ ಮುಸುರೆ ಊಟವನ್ನು ವಿದ್ಯಾರ್ಥಿಗಳು ಹಾಗೂ ಭಕ್ತಾದಿಗಳಿಗೆ ಉಣಬಡಿಸುತ್ತಾರೆ. ಇನ್ನು ತರಕಾರಿಗಳು ಕೊಳೆತು ವಾಸನೆ ಬರುತ್ತಿರುತ್ತವೆ. ಮಿಕ್ಕ ಊಟವನ್ನು ಎಲ್ಲೆಂದರಲ್ಲಿ ಚೆಲ್ಲಿ ದುರ್ವಾಸನೆ ಬೀರುವಂತೆ ಮಾಡಿದ್ದಾರೆ. ಇದರಿಂದ ಇಲ್ಲಿಗೆ ಬರುವ ಭಕ್ತಾದಿಗಳ ಮೇಲೆ ದುಷ್ಪರಿಣಾಮ ಬೀರುವ ಮೊದಲು ಇಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ.

■ -ರೇಣುಕಮ್ಮ, ಅಧ್ಯಕ್ಷರು, ರೇಣುಕಾ ಮಹಿಳಾ ಮಂಡಳಿ, ರಂಗಪ್ಪನಪಾಳ್ಯ, ಶಿರಾಟೌನ್,
ಸುನಿತಾ ಮೂರ್ತಿ, ಕರವೇ ಜಿಲ್ಲಾಧ್ಯಕ್ಷರು (ಮಹಿಳಾ ಘಟಕ.)

ವಿದ್ಯಾರ್ಥಿ ವೇತನ ಕೊಡಿಸಿಕೊಡಿ

ಮಾನ್ಯರೇ

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಎಲ್ಲಾ ಪ್ರೌಢಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಸ್ಕಾಲರ್ ಷಿಪ್ ಕೊಟ್ಟಿರುವುದಿಲ್ಲ. 2013-14ನೇ ಸಾಲಿನಿಂದ ಇಲ್ಲಿಯವರೆಗೆ ಅಂದರೆ 2018ರವರೆಗೆ ಯಾವ ಮಕ್ಕಳಿಗೂ ವಿದ್ಯಾರ್ಥಿ ವೇತನವನ್ನು ಸರ್ಕಾರ ನೀಡಿರುವುದಿಲ್ಲ. ಬಡ ವಿದ್ಯಾರ್ಥಿಗಳು ಅರ್ಜಿ ಹಾಕಿ ಕಾಯುತ್ತಿದ್ದಾರೆ. ಶಾಲೆಗಳಲ್ಲಿ ವಿಚಾರಿಸಿದರೆ ಇನ್ನು ಸರ್ಕಾರ ಕಳುಹಿಸಿಲ್ಲ ನಾವೇನು ಮಾಡೋಣ ಎಂಬ ಉತ್ತರವನ್ನು ನೀಡುತ್ತಾರೆ. ವಿದ್ಯಾರ್ಥಿಗಳಲ್ಲದೆ ಪೋಷಕರು ಸಹ ಶಾಲೆಗಳಿಗೆ ಎಡತಾಕುತ್ತಿರುವುದು ಸರ್ವೆಸಾಮಾನ್ಯವಾಗಿದೆ. 8 ಮತ್ತು 9ನೇ ತರಗತಿ ಮಕ್ಕಳಿಗೆ ರಾಜ್ಯ ಸರ್ಕಾರ ವಿದ್ಯಾರ್ಥಿ ವೇತನ ನೀಡುತ್ತದೆ, 10ನೇ ತರಗತಿ ಮಕ್ಕಳಿಗೆ ಕೇಂದ್ರ ಸರ್ಕಾರ ವಿದ್ಯಾರ್ಥಿ ವೇತನ ನೀಡುತ್ತದೆ. ಆದ್ದರಿಂದ ಸಾರ್ಕಾರ ಕಳುಹಿಸಿದರೆ ನಾವು ಕೊಡುತ್ತೇವೆ ಎಂದು ಶಾಲಾ ಶಿಕ್ಷಕರು ಜಾರಿಕೆಯ ಉತ್ತರ ನೀಡುತ್ತಿದ್ದಾರೆ. ಅಲ್ಲದೆ ಸಮಾಜ ಕಲ್ಯಾಣ ಇಲಾಖೆ ಮತ್ತು ಡಿಡಿಪಿಐ ಕಚೇರಿಗಳಲ್ಲಿ ಕೇಳಿದರೂ ಇದೇ ಉತ್ತರ ಸಿಗುತ್ತದೆ. ಆದ್ದರಿಂದ ಸರ್ಕಾರವಾಗಲೀ, ಆಯ ಶಾಲಾ ಮುಖ್ಯ ಶಿಕ್ಷಕರಾಗಲೀ, ಸಂಬಂಧಿಸಿದ ಇಲಾಖೆಗಳಾಗಲಿ ಈ ಬಗ್ಗೆ ಹೆಚ್ಚಿನ ಗಮನವರಿಸಿ ಬಡ ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಹಾಯವಾಗುವ ವಿದ್ಯಾರ್ಥಿ ವೇತನವನ್ನು ಶೀಘ್ರವಾಗಿ ಕೊಡಿಸಿಕೊಡುವಂತೆ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ.

■ -ನೊಂದ ಪೋಷಕರು, ಗುಬ್ಬಿ ತಾ.

ಪಿಂಚಣಿದಾರರಿಗೂ ಮನೆ ಬಾಡಿಗೆ ಭತ್ಯೆ ವಿಸ್ತರಿಸಲಿ

ಮಾನ್ಯರೆ,

ಇತ್ತೀಚೆಗೆ ಹೊಸ ಅಂದರೆ, 6ನೇ ವೇತನ ಶ್ರೇಣಿ ಬಿಡುಗಡೆ ಆಗುತ್ತಿರುವುದು ಸಂತಸದ ಸಂಗತಿಯೇ ಸರಿ. ಹಾಲಿ ಸರ್ಕಾರಿ ನೌಕರರಿಗೂ ಮತ್ತು ಪಿಂಚಣಿದಾರರಿಗೂ ಮನೆ ಬಾಡಿಗೆ ಭತ್ಯೆ ಸಾಮಾನ್ಯವಾಗಿ ನೀಡಬೇಕಾಗಿರುವುದು ಅಗತ್ಯ. ಆದರೆ ಪಿಂಚಣಿದಾರರಿಗೆ ಮನೆ ಬಾಡಿಗೆ ಭತ್ಯೆ ನೀಡದಿರುವುದು ವಿಷಾದನೀಯ ಸಂಗತಿಯೇ ಸರಿ. ಯಾವುದೇ ಸರ್ಕಾರಿ ನೌಕರನಿಗೂ ಮತ್ತು ಪಿಂಚಣಿಅದಾರನಿಗೂ ಮನೆ ಬಾಡಿಗೆ ಭತ್ಯೆ ನೀಡುವುದರಲ್ಲಿ ತಾರತಮ್ಯವಿರಬಾರದು. ಏಕೆ ಸರ್ಕಾರಿ ನೌಕರ ಮಾತ್ರ ಮನೆ ಬಾಡಿಗೆ ಭತ್ಯೆ ಪಡೆಯಲು ಅರ್ಹನಾಗಿದ್ದಾನೆಯೇ? ಮೂಲ ವೇತನ, ತುಟ್ಟಿಭತ್ಯೆಯ ಜೊತೆಗೆ ಪಿಂಚಣಿದಾರರಿಗೂ ಸಹ ಮನೆ ಬಾಡಿಗೆ, ಭತ್ಯೆ ಸೌಲಭ್ಯವನ್ನು ವಿಸ್ತರಿಸಲೇಬೇಕು. ಮುಖ್ಯಮಂತ್ರಿಗಳು ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಿ.

ಹೌದು ಯಾವೊಬ್ಬ ನೌಕರನೂ ಬಾಡಿಗೆ ಮನೆಯಲ್ಲಿ ಇದ್ದಾನೆ ಎಂದರೆ ಅದೇ ರೀತಿ ಪಿಂಚಣಿದಾರನೂ ಸಹ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾನೆ ಎಂಬ ಸತ್ಯ ಸರ್ಕಾರಕ್ಕೆ ಅರಿವಾಗಲಿ. ಅದೆಷ್ಟೋ ಮಂದಿ ಸರ್ಕಾರಿ ನೌಕರರು ಸ್ವಂತ ಮನೆಯನ್ನು ಕಟ್ಟಿಸಿಕೊಂಡು ಜೊತೆಯಲ್ಲಿಯೇ ಮನೆ ಬಾಡಿಗೆ ಭತ್ಯೆ ಕೂಡಾ ಪಡೆಯುತ್ತಿದ್ದಾನೆ. ಆದರೆ ಸುಮಾರು ಪಿಂಚಣಿದಾರರು ಇಂದಿಗೂ ಕೂಡಾ ಮನೆಯಲ್ಲಿ ವಾಸಿಸುತ್ತಿದ್ದಾನೆ. ಆದ್ದರಿಂದ ಸರ್ಕಾರ ಮಾನವೀಯ ದೃಷ್ಟಿಯನ್ನಿಟ್ಟುಕೊಂಡು ಮುಂದಿನ ಹೊಸ 6ನೇ ವೇತನ ಆಯೋಗದಲ್ಲಾದರೂ ಪಿಂಚಣಿದಾರರಿಗೂ ಮನೆ ಬಾಡಿಗೆ ಭತ್ಯೆ ವಿಸ್ತರಿಸಬೇಕಾಗಿ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

■ -ರಘುನಂದನ್, (8550882008), ನಿವೃತ್ತಿ ನೌಕರ, ತುಮಕೂರು.

ಹುಳಿಯಾರು: ಶ್ರದ್ಧಾಭಕ್ತಿಯ ಶಿವರಾತ್ರಿ

ಹುಳಿಯಾರು

ಪಟ್ಟಣ ಸೇರಿದಂತೆ ಹೋಬಳಿಯ ಹಲಗ್ರಾಮಗಳಲ್ಲಿ ಮಂಗಳವಾರದಂದು ಶಿವ ರಾತ್ರಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಪಟ್ಟಣದ ಶ್ರೀಮಲ್ಲೇಶ್ವರ ಸ್ವಾಮಿ ದೇವಾಲಯ ಸೇರಿದಂತೆ, ಗಾಂಧಿಪೇಟೆಯ ಕನ್ನಿಕಾಪರಮೇಶ್ವರಿ, ವಿಪ್ರ ಸಮಾಜದ ಸೀತಾರಾಮ ಕಲ್ಯಾಣ ಮಂದಿರದಲ್ಲಿ, ತಿರುಮಲಾಪುರದ ಚಂದ್ರಮೌಳೇಶ್ವರ ದೇಗುಲದಲ್ಲಿ,ಯಳನಾಡು ಶ್ರೀ ಸಿದ್ದರಾಮೇಶ್ವರ ಸ್ವಾಮಿ ದೇವಾಲಯ, ಕೆಂಕೆರೆಯ ಶ್ರೀಕಲ್ಲೇಶ್ವರಸ್ವಾಮಿ ದೇವಾಲಯದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಪರಶಿವನಿಗೆ ಮುಂಜಾನೆಯಿಂದಲೆ ವಿಶೇಷ ಪೂಜಾಕೈಂಕರ್ಯಗಳು ನಡೆಯಿತು.

ಶಿವಲಿಂಗಕ್ಕೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಪಂಚಾಮೃತಾಭಿಷೇಕ, ಜಾವದಪೂಜೆ, ಹೋಮ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು.ಎಲ್ಲಡೆಯೂ ಶಿವರಾತ್ರಿ ಸಂಭ್ರಮ ಮನೆ ಮಾಡಿತ್ತು.ಎಲ್ಲಾ ದೇವಾಲಯಗಳಲ್ಲೂ ಬೆಳಿಗ್ಗೆಯಿಂದಲೇ ಭಕ್ತರು ತೆರಳಿ ಶಿವನ ದರ್ಶನ ಪಡೆಯುತ್ತಿದ್ದುದ್ದು ಸಾಮಾನ್ಯವಾಗಿತ್ತು.

ಮಲ್ಲೇಶ್ವರ ಸ್ವಾಮಿ ದೇವಾಲಯದಲ್ಲಿ ಮುಂಜಾನೆಯಿಂದಲೇ ಪ್ರಾರಂಭವಾದ ದರ್ಶನದಲ್ಲಿ ಅಲಂಕೃತ ಸ್ವಾಮಿಯನ್ನು ನೋಡಲು ಅಪಾರ ಸಂಖ್ಯೆಯ ಭಕ್ತಾಧಿಗಳು ತಂಡೋಪತಂಡವಾಗಿಆಗಮಿಸಿದ್ದು, ಸರದಿ ಸಾಲಿನಲ್ಲಿ ಸಾಗುವ ಮೂಲಕ ಸ್ವಾಮಿಯ ದರ್ಶನ ಪಡೆದು ಹಣ್ಣುಕಾಯಿ ಮಾಡಿಸಿದರು.

ಬೆಳಗಿನಜಾವ ಸ್ವಾಮಿಗೆ ಏಕದಶವಾರು ರುದ್ರಾಭಿಷೇಕ, ಬಿಲ್ವಾರ್ಚನೆ, ಮಹನ್ಯಾಸಪೂರಕ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆದವು. ಈ ವೇಳೆ ಮಲ್ಲೇಶ್ವರಸ್ವಾಮಿ ದೇವಾಲಯ ಸಮಿತಿ ಹಾಗೂ ಟ್ರಸ್ಟ್ ನ ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಿವರಾತ್ರಿ ಪ್ರಯುಕ್ತ ಗಣೇಶನ ದೇವಾಲಯ ಹಾಗೂ ಆಂಜನೇಯ ಸ್ವಾಮಿ ದೇಗುಲದಲ್ಲಿ ಶ್ರೀ ಸ್ವಾಮಿಯವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಶಿವರಾತ್ರಿ ಶಿವಭಕ್ತರಿಗೆ ಅತ್ಯಂತ ಪವಿತ್ರ ದಿನವಾಗಿದ್ದು ಹೆಚ್ಚಿನ ಭಕ್ತಾಧಿಗಳು ದಿನವಿಡಿ ಉಪವಾಸ, ಜಾಗರಣೆ ಕೈಗೊಂಡು, ಶಿವನಾಮ ಭಜಿಸಿದರು

ಏ.21ರಂದು ಜವಾಹರ್ ನವೋದಯ ಪ್ರವೇಶ ಪರೀಕ್ಷೆ

ತುಮಕೂರು

ಜವಾಹರ್ ನವೋದಯ ವಿದ್ಯಾಲಯದ 2018-19ನೇ ಸಾಲಿನ ಪ್ರವೇಶಕ್ಕಾಗಿ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಏಪ್ರಿಲ್ 21ರಂದು ಪ್ರವೇಶ ಪರೀಕ್ಷೆ ನಡೆಯಲಿದೆ.

ಹೆಚ್ಚಿನ ವಿವರಗಳಿಗೆ ವಿದ್ಯಾಲಯದ ವೆಬ್‌ಸೈಟ್ www.invtumkur.org ಅಥವಾ ದೂರವಾಣಿ 0816-2265316 ಸಂಪರ್ಕಿಸಬಹುದಾಗಿದೆ ಎಂದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರ ವರ್ಗಾವಣೆ: ಆಕ್ಷೇಪಣೆಗೆ ಆಹ್ವಾನ

ತುಮಕೂರು

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಕರ ವೃಂದದ ಶಿಕ್ಷಕರುಗಳಿಗೆ ಕಡ್ಡಾಯ 2017-18 ನೇ ಸಾಲಿನಲ್ಲಿ ವರ್ಗಾವಣೆ ಮಾಡುವ ಸಂಬಂಧ ಕಡ್ಡಾಯ ವರ್ಗಾವಣೆಗೆ ಅರ್ಹರಿರುವ ಶಿಕ್ಷಕರ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಕಡ್ಡಾಯ ವರ್ಗಾವಣೆಯ ಶಿಕ್ಷಕರ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಪ್ರೌಢ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಫೆ.16 ಹಾಗೂ ಪ್ರಾಥಮಿಕ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಫೆ.17ರೊಳಗಾಗಿ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ www.schooleducation.com ಭೇಟಿ ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳ ಬಗ್ಗೆ ಪೋಷಕರು ಸದಾ ಎಚ್ಚರವಹಿಸಲು ಸಲಹೆ

ದೊಡ್ಡೇರಿ

ಶಾಲೆಗೆ ಕಳುಹಿಸುತ್ತಿರುವ ಮಕ್ಕಳ ಬಗ್ಗೆ ಶಿಕ್ಷಕರಿಗೆ ಎಷ್ಟು ಜವಾಬ್ದಾರಿ ಇರುತ್ತದೆಯೋ ಅಷ್ಟೇ ಜವಾಬ್ದಾರಿ ತಂದೆ ತಾಯಿಗಳಿಗೆ ತಮ್ಮ ಮಕ್ಕಳ ಬಗ್ಗೆ ಇರಬೇಕೆಂದು ತಿಳಿಸಿದರು.

ಗ್ರಾಮದ ಸ.ಹಿ.ಪ್ರಾ.ಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ ಪ್ರಥಮ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿ ಮಾತನಾಡಿದ ಜಿ.ಪಂ ಸದಸ್ಯ ಚೌಡಪ್ಪ, ವಿದ್ಯಾರ್ಥಿಗಳು ನಾಲ್ಕು ಗೋಡೆ ಮಧ್ಯದಲ್ಲಿ ಕಲಿಯುವ ಬದಲು ಪ್ರತಿನಿತ್ಯ ದಿನ ಪತ್ರಿಕೆ, ನಿಯತಕಾಲಿಕ ಓದುವಂತಹ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ನಗರ ಪ್ರದೇಶದ ಖಾಸಗಿ ಸಂಸ್ಥೆಯ ವಿದ್ಯಾರ್ಥಿಗಳಿಗಿಂತ ಗ್ರಾಮೀಣ ಪ್ರದೇಶ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ನೀವುಗಳು ಮೇಲುಗೈಸಾಧಿಸ ಬೇಕು ಎಂದರು.

ಶಾಸಕರಾದ ಕೆ.ಎನ್ ರಾಜಣ್ಣನವರು ಕಳೆದ 70 ವರ್ಷಗಳಿಂದ ಸಾಧ್ಯವಾಗದಂತಹ ಸಾಧನೆಯನ್ನು ಕೇವಲ ನಾಲ್ಕೂವರೆ ವರ್ಷಗಳಲ್ಲಿ ಮಧುಗಿರಿ ಕ್ಷೇತ್ರದಲ್ಲಿ ಮಾಡಿ ತೋರಿಸಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ವಿದ್ಯಾರ್ಥಿಜ್ಯೋತಿ, ಕ್ಷೀರಭಾಗ್ಯ, ಉಚಿತ ನೋಟ್ ಪುಸ್ತಕ, ಉಚಿತ ಬಸ್ ಪಾಸ್ ಇನ್ನೂ ಮುಂತಾದ ಯೋಜನೆಗಳನ್ನು ನಮ್ಮ ಕ್ಷೇತ್ರದಲ್ಲಿ ಶಾಸಕರು ವೈಯಕ್ತಿಕವಾಗಿ ನೆರವೇರಿಸಿದ್ದಾರೆ ಎಂದರು. ಮುಖ್ಯಶಿಕ್ಷಕ ನರಸಪ್ಪ ಮಾತನಾಡಿ ಬರುವ ಶೈಕ್ಷಣಿಕ ವರ್ಷದಲ್ಲಿ ಶತಮಾನೋತ್ಸವ ಆಚರಿಸಬೇಕೆಂದು ಪ್ರಾಸ್ತಾವಿಕ ಮಾತಿನಲ್ಲಿ ತಿಳಿಸಿದರು. ಅಧ್ಯಕ್ಷತೆ ಎಸ್.ಡಿ.ಎಂ.ಸಿ ಅಧ್ಯಕ್ಷರು ದೊಡ್ಡೇರಿ ಕಣಿಮಯ್ಯ ವಹಿಸಿ, ನಿರೂಪಣೆ ಪಾಪಣ್ಣನಿರ್ವಹಿಸಿ, ವಿಜಯಲಕ್ಷ್ಮೀ ಶಾಲಾ ವರದಿ ವಾಚಿಸಿದರು. ಗಾಯತ್ರಿ ಸ್ವಾಗತಿಸಿ, ಸೌಭಾಗ್ಯಮ್ಮ ವಂದಿಸಿದರು. ಗ್ರಾ.ಪಂ ಅಧ್ಯಕ್ಷರಾದ ಲಕ್ಷ್ಮೀದೇವಮ್ಮ, ಗ್ರಾ.ಪಂ ಸದಸ್ಯ ಚಂದ್ರಶೇಖರಾರಾಧ್ಯ, ಎಸ್.ಡಿ.ಎಂ.ಸಿ ಸದಸ್ಯರುಗಳಾದ ಬಸವರಾಜು, ತಿಮ್ಮರಾಜು, ಜಯಮ್ಮ, ಕೆಂಚಮ್ಮ, ರಾಜಲಕ್ಷ್ಮಮ್ಮ, ವರದರಾಜು, ದಾಸಪ್ಪ, ಹಳೆವಿದ್ಯಾರ್ಥಿಸಂಘದ ಅಧ್ಯಕ್ಷ ಕೆ.ಕೃಷ್ಣನಾಯ್ಕ, ಪಿ.ಡಿ.ಓ ಯೋಗಶ್ರೀನಿವಾಸ್, ಜಿಲ್ಲಾಶಿಕ್ಷಕಸಂಘದ ಅಧ್ಯಕ್ಷರಾಮಣ್ಣ ಸಿ.ಆರ್.ಪಿ ನಾಗೇಂದ್ರ ಉಪಸ್ಥಿತರಿದ್ದರು.

ಚೇಳೂರಿನ ಎಂ.ಪಿ.ರೋಹಿತ್ ತಮ್ಮ ಮನೆತನದ ಕಾಯಕಕ್ಕೆ ಮಹಾಶಿವರಾತ್ರಿ ದಿನದಂದು ಜೋಳಿಗೆ ಹಿಡಿದು ಪುಟ್ಟಜಂಗಮನಾಗಿ ಭಿಕ್ಷೆಗೆ ಸಿದ್ದನಾಗಿ ಬಂದಿರುವುದು..!

ಮನ ಮುರಿಯುತ್ತಿರುವ ವಾಟ್ಸ್‌ಪ್ ಸಂದೇಶಗಳು...!

ತುಮಕೂರು

ಫೆಬ್ರುವರಿ 8ರ ಗುರುವಾರದಂದು ಉತ್ತರ ಪ್ರದೇಶದ ಲಜ್ಜತ್ ನಗರದಲ್ಲಿ ನಡೆದ ಘಟನೆ ಇದು. ತನ್ನ ಪತಿ ನಿರಂತರವಾಗಿ ವಾಟ್ಸಪ್ ಚಾಟ್ ಮಾಡುತ್ತಿದುದರಿಂದ ರೋಸಿಹೋದ ಪತ್ನಿ ಬೇಸತ್ತು ನಿದ್ರೆ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಪ್ರಯತ್ನಿಸಿದಳು. ಇವರ ವಿವಾಹ 12 ವರ್ಷಗಳ ಹಿಂದೆಯೇ ನಡೆದಿತ್ತು. ಈ ದಂಪತಿಗೆ ಎರಡು ಮಕ್ಕಳೂ ಸಹ ಇವೆ. ಆದರೆ ಇತ್ತೀಚೆಗೆ ಪತಿರಾಯ ವಾಟ್ಸ್‌ಪ್ ಸಂದೇಶದಲ್ಲಿ ಮುಳುಗಿದುದು ಕೌಟುಂಬಿಕ ಸಮಸ್ಯೆಗೆ ಮೂಲ ಕಾರಣ.

ಪತಿ ಹೀಗೆ ವಾಟ್ಸ್‌ಪ್‌ನಲ್ಲಿ ಮುಳುಗಿ ಹೋಗಲು ಕಾರಣವೂ ಇದೆ. ಆತ ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಸಹೋದ್ಯೋಗಿಯೊಬ್ಬರ ಪರಿಚಯ ತೀರಾ ಹತ್ತಿರವಾಗಿದೆ. ಆನಂತರ ವಾಟ್ಸ್‌ಪ್ ಮಾಡುವುದನ್ನು ರೂಢಿಸಿಕೊಂಡಿದ್ದಾನೆ. ಇದು ಹೆಚ್ಚಾದಂತೆಲ್ಲಾ ಪತ್ನಿಯ ಗಮನಕ್ಕೆ ಬಂದಿದೆ. ಆದರೂ ಚಾಳಿ ಬಿಡದ ಗಂಡನ ವರ್ತನೆಗೆ ಬೇಸತ್ತು ಪತ್ನಿ ನಿದ್ರೆ ಮಾತ್ರೆ ಸೇವಿಸಿದ್ದಾಳೆ. ಇದು ಬಹಿರಂಗವಾಗಿರುವ ಒಂದು ದೃಷ್ಟಾಂತ. ಮೊಬೈಲ್‌ಗಳ ಮೂಲಕ ಹರಿದಾಡುವ ಸಂದೇಶಗಳು ಮನ ಕಲಕುವುದು ಮಾತ್ರವಲ್ಲದೇ ಮನೆ ಮುರಿಯುವ ಕೆಲಸವನ್ನೂ ಮಾಡುತ್ತಿವೆ. ಇಂತಹ ಸಂದೇಶಗಳ ಸುಳಿಯಲ್ಲಿ ಸಿಲುಕಿರುವ ಅದೆಷ್ಟೋ ಜನ ಮಾನಸಿಕ ಖಿನ್ನತೆಗೂ ಒಳಗಾಗಿದ್ದಾರೆ. ಶಾಲಾ ಕಾಲೇಜು ವಿದ್ಯಾರ್ಥಿಗಳು ಒಂದುರೀತಿಯ ವ್ಯಾಮೋಹಕ್ಕೆ ಒಳಗಾದರೆ ಮಹಿಳೆಯರು ಕೆಲವೊಮ್ಮೆ ಇನ್ನಿಲ್ಲದ ಸಂಕಷ್ಟ ಅನುಭವಿಸುತ್ತಿದ್ದಾರೆ. ಯಾರದೋ ಸಂದೇಶ ಮತ್ಯಾರಿಗೋ ರವಾನೆಯಾಗಿ ಕೌಟುಂಬಿಕ ಸಂಬಂಧಗಳೇ ಛಿದ್ರವಾಗುವ ಆತಂಕ ಬಹಳಷ್ಟುಜನರಲ್ಲಿ ಎದುರಾಗಿದೆ.

ಉತ್ತರ ಪ್ರದೇಶದ ನಗರವೊಂದರಲ್ಲಿ ಮಾತ್ರವೇ ಅಲ್ಲ, ಎಲ್ಲ ಕಡೆಯೂ ಇಂತಹ ಪ್ರಕರಣಗಳು ಸಾಮಾನ್ಯವಾಗತೊಡಗಿವೆ.

ಮೊಬೈಲ್‌ಗಳು ಕೈಗಳಲ್ಲಿ ಹರಿದಾಡುತ್ತಿರುವ ಈ ದಿನಗಳಲ್ಲಿ ಮೊಬೈಲ್ ಉಪಯೋಗ ಎಷ್ಟು ಉಪಯುಕ್ತವೋ ಅಷ್ಟೇ ಅನಾಹುತಕಾರಿ ಸಂಗತಿಗಳಿಗೂ ಇದೇ ಮೊಬೈಲ್‌ಗಳು ಕಾರಣವಾಗುತ್ತಿವೆ. ಮೆಸೇಜ್‌ಗಳ ನಂತರ ಈಗ ವಾಟ್ಸ್‌ಪ್‌ಗಳ ಸರದಿ. ಇಲ್ಲಿ ಅನಿಯಮಿತ ಟಾಕಿಂಗ್ ಯೋಜನೆ ಜಾರಿ ಇರುವುದರಿಂದ ಖರ್ಚು ಬರುತ್ತದೆಂಬ ಭಯ ಇರುವುದಿಲ್ಲ. ಇದೇ ಬಹಳಷ್ಟು ಜನರ ಕೈಗಳು ಮೊಬೈಲ್‌ನಲ್ಲಿ ಹರಿದಾಡಲು ಕಾರಣವಾಗುತ್ತಿವೆ. ನಿಗದಿತ ವಾಯಿದೆಯೊಳಗೆ ಹಾಕಿಸಿಕೊಂಡಿರುವ ರೀಚಾರ್ಜ್ ಮೊತ್ತವನ್ನು ಖರ್ಚು ಮಾಡಬೇಕು ಅಥವಾ ಇರುವ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ಮುಂದಾಗುವ ಜನತೆ ಸಂದೇಶಗಳ ಮೊರೆ ಹೋಗುತ್ತಾರೆ. ಇವು ಅನಿವಾರ್ಯವಾಗಿ ಸಂಕಷ್ಟ ಸ್ಥಿತಿಗೆ ತಂದೊಡ್ಡುತ್ತಿವೆ.

ಮಕ್ಕಳಿಂದ ಹಿಡಿದು ದೊಡ್ಡವರ ತನಕ ಮೊಬೈಲ್‌ಗಳು ಸುಲಭವಾಗಿ ಸಿಗುತ್ತಿವೆ. ಹೇಗಾದರೂ ನಂಬರ್‌ಗಳನ್ನು ಪಡೆಯಲು ಸಾಧ್ಯವಿದೆ. ಉದ್ಯೋಗಸ್ಥ ಸ್ಥಳಗಳಲ್ಲಿ ಸಹಜವಾಗಿಯೇ ಪರಿಚಯವಾಗುತ್ತದೆ. ಯಾವುದೋ ಕಾರಣಕ್ಕೆ ಆರಂಭದಲ್ಲಿ ಕರೆ ಮಾಡುತ್ತಾ ನಂತರ ಸಾಮಾನ್ಯ ಎನ್ನುವಂತಾಗುತ್ತದೆ. ಇಬ್ಬರಲ್ಲಿಯೂ ಆರಂಭದಲ್ಲಿ ಯಾವುದೇ ಭಾವನೆಗಳು ಇರುವುದಿಲ್ಲ. ನಂತರದ ದಿನಗಳಲ್ಲಿ ಭಾವನೆಗಳು ತೆರೆದುಕೊಳ್ಳುತ್ತವೆ. ಅದು ಯಾರದರಲ್ಲೂ ಆಗಿರಬಹುದು. ಈ ಭಾವನೆಗಳು ತೆರೆದುಕೊಳ್ಳುವುದೇ ದುರಂತಗಳಿಗೆ ಕಾರಣವಾಗುತ್ತಿವೆ.

ಪೊಲೀಸ್ ಠಾಣೆಗಳು, ಮಹಿಳಾ ಕೇಂದ್ರಗಳು, ಸಲಹಾ ಕೇಂದ್ರಗಳ ಎಡತಾಕಿದರೆ ಮೊಬೈಲ್ ಮೂಲಕ ಸಂದೇಶ ರವಾನೆಯಾಗುವ ಅಥವಾ ಸ್ವೀಕರಿಸುವ ಪ್ರಕರಣಗಳ ತೀವ್ರತೆ ಎಷ್ಟು ಎಂಬುದು ಅರ್ಥವಾಗುತ್ತದೆ. ದಂಪತಿಗಳಿರುವ ಮನೆಯಲ್ಲಿ ಇಂತಹ ಸಂದೇಶಗಳು ಕಲಹಕ್ಕೂ ಕಾರಣವಾಗಿವೆ. ಎಷ್ಟೋ ಮಂದಿ ಇದೇ ವಿಷಯದಲ್ಲಿ ವಿಚ್ಛೇದನ ಪಡೆಯುವ ಹಂತಕ್ಕೂ ಹೋಗಿದ್ದಾರೆ. ಅಲ್ಲಿ ಬರುವ ಸಂದೇಶಗಳಿಗೆ ಬ್ರೇಕ್ ಹಾಕುವ ವ್ಯವಸ್ಥೆಗಳು ಇಲ್ಲದ ಕಾರಣ ಎಗ್ರಾಬಿರ್ರಿಯಾಗಿ ರವಾನೆಯಾಗುತ್ತಿರುವಾಗ ಯಾರನ್ನು ಬೇಕಾದರೂ ಅನುಮಾನಿಸಲು ಸಾಧ್ಯವಿದೆ. ಒಮ್ಮೆ ಅನುಮಾನ ಎಂಬುದು ಮನಸ್ಸಿಗೆ ಹೊಕ್ಕರೆ ಅದರಿಂದ ಹೊರಬರುವುದು ಅಷ್ಟು ಸುಲಭವಲ್ಲ.

ಕಳೆದ 6 ತಿಂಗಳ ಹಿಂದೆ ತುಮಕೂರಿನಲ್ಲಿಯೂ ಇಂತಹುದೇ ಘಟನೆ ಜರುಗಿ ಹೋಯಿತು. ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬರ ಮೊಬೈಲ್‌ಗೆ ಅಪರಿಚಿತನೊಬ್ಬ ಸಂದೇಶ ಕಳುಹಿಸುತ್ತಿದ್ದ. ಈಕೆ ಪ್ರತಿಕ್ರಿಯೆ ಕೊಡುತ್ತಿರಲಿಲ್ಲ. ಆದರೂ ಆತ ಬಿಡುತ್ತಿರಲಿಲ್ಲ. ಮೊಬೈಲ್ ಸಂದೇಶಗಳು ಬರುತ್ತಿರುವುದು ಗಂಡನಿಗೆ ಅರಿವಾಯಿತು. ಆತ ಪ್ರಶ್ನಿಸುವುದನ್ನು ಬಿಟ್ಟು ಅನುಮಾನಪಡಲು ಆರಂಭಿಸಿದ. ಕ್ರಮೇಣ ಹೆಂಡತಿಯನ್ನು ನಿರ್ಲಕ್ಷಿಸುತ್ತಾ ಬಂದ. ವಿವಾಹ ವಿಚ್ಛೇದನ ಪಡೆಯುವ ಮಟ್ಟಕ್ಕೂ ಅದು ತಲುಪಿತು. ಅಂತಿಮವಾಗಿ ಕೌನ್ಸಿಲಿಂಗ್ ಸೆಂಟರ್‌ಗೆ (ಸಾಂತ್ವನ ಕೇಂದ್ರ) ತೆರಳಿದಾಗ ನಿಜಾಂಶ ಬಯಲಿಗೆ ಬಂದಿತು. ಆಕೆಗೆ ಆಗದವ ಅಥವಾ ದ್ವೇಷ ಸಾಧಿಸುತ್ತಿದ್ದ ವ್ಯಕ್ತಿಯೊಬ್ಬ ಹೀಗೆ ಕೆಟ್ಟ ಸಂದೇಶಗಳನ್ನು ಕಳುಹಿಸುತ್ತಿದ್ದ. ಸುದೀರ್ಘ ದಿನಗಳ ನಂತರ ಆತ ಯಾರೆಂಬುದು ಬಹಿರಂಗವಾಯಿತು. ಅಂತೂ ಪತಿಯ ಮನದಲ್ಲಿದ್ದ ಅನುಮಾನ ದೂರವಾಯಿತು. ಅಂದರೆ, ಇಂತಹ ಸಂದರ್ಭಗಳಲ್ಲಿ ಮೂರನೆಯವರ ಮಧ್ಯಸ್ಥಿಕೆ ಸ್ವಲ್ಪ ಸಹಕಾರಿಯಾಗಬಹುದು. ಇಲ್ಲದೆ ಹೋದರೆ ಅನುಮಾನದ ಪೆಡಂಭೂತ ಸಂಸಾರವನ್ನೇ ಹಾಳು ಮಾಡಬಲ್ಲದು.

ಇನ್ನೂ ಒಂದು ವಿಚಿತ್ರಕಾರಿ ಸಂಗತಿ ಎಂದರೆ ವಾಟ್ಸ್‌ಪ್ ಅಥವಾ ಮೊಬೈಲ್ ಸಂದೇಶಗಳಿಂದ ಎಷ್ಟೋ ಮಂದಿ ಹತ್ತಿರವಾಗಿದ್ದಾರೆ. ಪ್ರೀತಿ-ಪ್ರೇಮದ ಬೆಸುಗೆಗೆ ಈ ಸಂದೇಶ ಒಂದು ಉತ್ತಮ ವಾಹಕವಾಗಿ ಕೆಲಸ ಮಾಡುತ್ತಿದೆ. ಇದೇ ಕಾರಣಕ್ಕೆ ಮನೆಗಳಲ್ಲಿ ಮಕ್ಕಳಿಗೆ ಮೊಬೈಲ್ ಕೊಡಿಸುವುದಕ್ಕೇ ನಿಷೇಧ ಹೇರಬೇಕು ಎಂದು ಅಬ್ಬರಿಸುತ್ತಿದ್ದಾರೆ. ಮೊಬೈಲ್‌ಗಳಿಂದಾಗಿಯೇ ಮನೆಗಳಲ್ಲಿ ಗಲಾಟೆಗಳು ನಡೆಯುತ್ತಿವೆ. ಕೆಲವು ಕುಟುಂಬಗಳಲ್ಲಿ ಇದು ಸಾಮಾನ್ಯ ಎನ್ನುವಂತಾಗಿದೆ. ಹಿಂದೆಲ್ಲ ಬೇರೆ ಬೇರೆ ವಿಷಯಗಳಿಗೆ ಮನೆಯಲ್ಲಿ ಗಲಾಟೆಗಳು ನಡೆಯುತ್ತಿದ್ದರೆ ಈಗ ಮೊಬೈಲ್ ವಿಷಯಗಳಿಗೆ ಗಲಾಟೆಗಳು ನಡೆಯುತ್ತಿವೆ.

ಮೊಬೈಲ್ ಉಪಯೋಗಿಸುವ ಯಾರೇ ಆಗಲಿ ಸ್ವೀಕರಿಸಿದ ಸಂದೇಶ ಯಾರದ್ದು ಎಂದು ನೋಡದೆ ಪ್ರತಿಕ್ರಿಯಿಸುವುದು ಸೂಕ್ತವಲ್ಲ. ಪರಿಚಿತರಾದರೂ ಅಗತ್ಯಕ್ಕೆ ತಕ್ಕಷ್ಟೇ ಪ್ರತಿಕ್ರಿಯಿಸುವುದು ಉತ್ತಮ. ಎಲ್ಲೆಯನ್ನು ಮೀರಿ ಪ್ರತಿಕ್ರಿಯಿಸುತ್ತಾ ಹೋಗುವುದು ಅನುಮಾನಗಳಿಗೆ ಆಸ್ಪದ ಕೊಡುವುದಂತೂ ಸತ್ಯ. ಪ್ರಸ್ತುತ ಇಂತಹ ಅನುಮಾನಗಳಿಂದ ಅನೇಕ ಮಂದಿ ಕೊರಗುತ್ತಿದ್ದಾರೆ. ಇವುಗಳನ್ನು ದೂರ ಮಾಡುವ ಪ್ರಯತ್ನ ಅವರಲ್ಲೇ ಇರುತ್ತದೆ. ಮೊಬೈಲ್ ಬಳಸುವಾಗ ಎಚ್ಚರಿಕೆ ಇದ್ದರೆ ಸಾಕು.

> ಮಕ್ಕಳಿಂದ ಹಿಡಿದು ದೊಡ್ಡವರ ತನಕ ಮೊಬೈಲ್‌ಗಳು ಸುಲಭವಾಗಿ ಸಿಗುತ್ತಿವೆ. ಹೇಗಾದರೂ ನಂಬರ್‌ಗಳನ್ನು ಪಡೆಯಲು ಸಾಧ್ಯವಿದೆ. ಉದ್ಯೋಗಸ್ಥ ಸ್ಥಳಗಳಲ್ಲಿ ಸಹಜವಾಗಿಯೇ ಪರಿಚಯವಾಗುತ್ತದೆ. ಯಾವುದೋ ಕಾರಣಕ್ಕೆ ಆರಂಭದಲ್ಲಿ ಕರೆ ಮಾಡುತ್ತಾ ನಂತರ ಸಾಮಾನ್ಯ ಎನ್ನುವಂತಾಗುತ್ತದೆ. ಇಬ್ಬರಲ್ಲಿಯೂ ಆರಂಭದಲ್ಲಿ ಯಾವುದೇ ಭಾವನೆಗಳು ಇರುವುದಿಲ್ಲ. ನಂತರದ ದಿನಗಳಲ್ಲಿ ಭಾವನೆಗಳು ತೆರೆದುಕೊಳ್ಳುತ್ತವೆ. ಅದು ಯಾರದರಲ್ಲೂ ಆಗಿರಬಹುದು. ಈ ಭಾವನೆಗಳು ತೆರೆದುಕೊಳ್ಳುವುದೇ ದುರಂತಗಳಿಗೆ ಕಾರಣವಾಗುತ್ತಿವೆ.
>
> ■ -ಸಾ.ಚಿ.ರಾಜಕುಮಾರ